ಚುಟುಕು ಸುದ್ದಿ

ವಿದ್ಯುತ್ ಗ್ರಾಹಕರ ಕುಂದು ಕೊರತೆ ಸಭೆ

ಧಾರವಾಡ: ಇಲ್ಲಿಯ ಮೆಸ್ಕಾಂ ಕಾರ್ಯಾಲಯದ ಸಭಾಂಗಣದಲ್ಲಿ ಹೆಸ್ಕಾಂ ಕಾರ್ಯಾಲಯ ಉಪ ವಿಭಾಗ-2 ಕಚೇರಿಯಲ್ಲಿ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್ ದೇವಪ್ಪಾ ಹೆಗಡೆ ಅವರ ಅಧ್ಯಕ್ಷತೆಯಲ್ಲಿ ಗ್ರಾಹಕರ ಕುಂದು ಕೊರತೆಗಳ ಸಭೆ ಜು. 18ರ ಮಧ್ಯಾಹ್ನ 3ಕ್ಕೆ ಆಯೋಜಿಸಲಾಗಿದೆ.

ಶಕರ ಉಪ ವಿಭಾಗ-2, ವ್ಯಾಪ್ತಿಯಲ್ಲಿ ಬರುವ ವಿದ್ಯುತ್ ಗ್ರಾಹಕರು ಸಭೆಗೆ ಹಾಜರಾಗಿ ತಮ್ಮ ವಿದ್ಯುತ್ ಬಗ್ಗೆ ಇದ್ದ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬೇಕು ಎಂದು ಹೆಸ್ಕಾಂನ ಕಾರ್ಯ ಮತ್ತು ಪಾಲನೆ ಉಪ ವಿಭಾಗ-2ರ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

18 ರಂದು ಬೆಳಗಾವಿಯಲ್ಲಿ ಕಾರ್ಮಿಕ ವಿವಾದ ವಿಚಾರಣೆ

ಹುಬ್ಬಳ್ಳಿ: ಹುಬ್ಬಳ್ಳಿ ಔದ್ಯಮಿಕ ನ್ಯಾಯಾಧೀಕರಣದ ಅಧ್ಯಕ್ಷಾಧಿಕಾರಿಗಳು ಮತ್ತು ಜಿಲ್ಲಾ ನ್ಯಾಯಾಧೀಶರಾದ ಗುರುರಾಜ ಜಿ. ಶಿರೋಳ ಅವರು ಬೆಳಗಾವಿ ಜಿಲ್ಲೆಗೆ ಸಂಬಂಧಿಸಿದ ಕಾರ್ಮಿಕ ವಿವಾದಗಳ ವಿಚಾರಣೆಯನ್ನು ಜು. 18 ರಂದು ಬೆಳಗ್ಗೆ 11ಕ್ಕೆ ಬೆಳಗಾವಿ ಹೊಸ ಜಿಲ್ಲಾ ನ್ಯಾಯಾಲಯ ಸಂಕೀರ್ಣದಲ್ಲಿರುವ ಹಳ್ಳುವರಿ ಕಟ್ಟಡದ ನೆಲಮಹಡಿಯಲ್ಲಿನ ಹಳೆಯ ಕೌಟುಂಬಿಕ ನ್ಯಾಯಾಲಯದಲ್ಲಿ ನಡೆಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ರೈಲ್ವೆ ನಿಲ್ದಾಣ ಅಭಿವೃದ್ಧಿಯೊಂದೇ ಸಾಕೆ ? । ಹೆಚ್ಚು ರೈಲು ನಿಲುಗಡೆಯೂ ಆಗಲಿ: ಜನರ ಒತ್ತಾಸೆ

ಹೈಟೆಕ್ ರೈಲು ನಿಲ್ದಾಣ ಲೋಕಾರ್ಪಣೆ ನಾಳೆ

■ ಗುರುರಾಜ ಸಬನೀಸ

ಸಂ.ಕ. ಸಮಾಚಾರ ಅಳ್ವಾವರ

ಅಮೃತ ಭಾರತ ರೈಲು ನಿಲ್ದಾಣ ಕಾರ್ಯಕ್ರಮದಡಿ ಹೈಟೆಕ್ ಮಾದರಿಯಲ್ಲಿ ನಿರ್ಮಾಣಗೊಂಡಿರುವ ಅಳ್ವಾವರ ರೈಲು ನಿಲ್ದಾಣ ಪಟ್ಟಣಕ್ಕೊಂದು ಶೋಭೆ ತರುತ್ತಿರುವದು ಹೆಮ್ಮೆಯ ಸಂಗತಿ.

ಕೋಟ್ಯಾಂತರ ಹಣದಲ್ಲಿ ನಿರ್ಮಾಣಗೊಂಡಿರುವ ನಿಲ್ದಾಣದಲ್ಲಿ ರೈಲುಗಳ ನಿಲುಗಡೆಯೇ ಇಲ್ಲದಿದ್ದರೆ ಪ್ರಯೋಜನವೇನು.. ಎನ್ನುವ ಚರ್ಚೆ ಸಾರ್ವಜನಿಕ ವಲಯದಲ್ಲಿ ಕೇಳಿ ಬರುತ್ತಿದೆ.

ನೈಋತ್ಯ ರೇಲ್ವೆ ವ್ಯಾಪ್ತಿಯಲ್ಲಿ ಬರುವ ಶತಮಾನಗಳ ಇತಿಹಾಸ ಹೊಂದಿರುವ ಅಳ್ವಾವರ ರೈಲು ನಿಲ್ದಾಣದಲ್ಲಿ ಬೆಳೆಗೆಕೆಯಷ್ಟು ಅಂದರೆ ದಿನವೊಂದರಲ್ಲಿ ಏಳೆಂಟು ರೈಲುಗಳ ನಿಲುಗಡೆ ಹೊರತು ಪಡಿಸಿದರೆ. ಈ ಮಾರ್ಗದಲ್ಲಿ ಸಂಚರಿಸುವ ಬಹಶೇಕ ರೈಲುಗಳಿಗೆ ನಿಲುಗಡೆ ಇಲ್ಲ. ಬರೀ ಟಾ ಟಾ... ಬೈ ಬೈ.... ಮಾಡುತ್ತಾ ಪ್ರಯಾಣಿಕರಿಗೆ ಅಣಕಿಸುವ ರೀತಿಯಲ್ಲಿ ಸಾಗಿ ಹೋಗುತ್ತಿವೆ. ಇದರಿಂದಜನರಿಗೆಸೇವೆದೊರೆಯದಂತಾಗಿದ್ದು, ರೈಲುಗಳ ನಿಲುಗಡೆ ಸೇವೆ ಕಲ್ಪಿಸುವಂತೆ ಬಹು ದಿನಗಳ ಬೇಡಿಕೆ ಈ ಭಾಗದ ಜನರದ್ದಾಗಿದೆ.

ಅಳ್ವಾವರವೂ ಸೇರಿದಂತೆ ಹಳಿಯಾಳ, ದಾಂಡೇಲಿ, ಖಾನಾಪೂರ ಭಾಗದ ಜನರು ಅಳ್ವಾವರ ರೈಲ್ವೆ ನಿಲ್ದಾಣವನ್ನೇ ಅವಲಂಭಿಸಿದ್ದು ಇದು ಪ್ರಯಾಣ ಬೆಳೆಸಲು ಸೂಕ್ತವೂ ಆಗಿದೆ. ಆದರೆ ಇಲ್ಲಿ ರೈಲುಗಳ ನಿಲುಗಡೆ ಇಲ್ಲದೇ ಇರುವುದರಿಂದ ಇಲ್ಲಿನ ಜನರು ಪರದಾಡುವಂತಾಗಿದೆ. ಗುಜರಾತ್, ರಾಜಸ್ಥಾನ್, ಮಹಾರಾಷ್ಟ್ರ ಸೇರಿದಂತೆ ದೇಶದ ವಿವಿಧ ಭಾಗದ ಜನರು ಇಲ್ಲಿನ್ನು ಅವರಿಗೆ ಹೋಗಿ ಬರಲು ರೈಲು ಇಲ್ಲದಾಗಿದೆ.

ರಾತ್ರಿ ಬೆಂಗಳೂರಿಗೆ ತೆರಳುವ ಬೆಳಗಾವಿ-ಬೆಂಗಳೂರು ಸೇರಿದಂತೆ ಅಜ್ಮೇರ, ಗಾಂಧಿಧಾಮ, ಜೋಧಪುರ ಜೊತೆಗೆ ಮಂತ್ರಾಲಯಕ್ಕೆ ಹೋಗುವ ಭಕ್ತರಿಗೆ ಅನುಕೂಲವಾಗಲು ಬೆಳಗಾವಿಯಿಂದ ಹೊರಡುವ ಹೈದ್ರಾಬಾದ ರೈಲುಗಳಿಗೆ ಪ್ರಮುಖವಾಗಿ ನಿಲುಗಡೆ ಮಾಡಬೇಕು ಎಂಬ ಒತ್ತಾಸೆ ಜನರದ್ದಾಗಿದೆ.

ಹೆಚ್ಚಿನ ರೈಲುಗಳ ನಿಲುಗಡೆಯಿಂದ ನಿಲ್ದಾಣಕ್ಕೂ ಮೆರಗು ಬರುವುದರ ಜೊತೆಗೆ ಇಲಾಖೆಗೆ ಆದಾಯವೂ ಬರಲಿದೆ. ಸರಕಾರದ ಉದ್ದೇಶವೂ ಈಡೇರಿದಂತಾಗುತ್ತದೆ ಎನ್ನುವ ಅಭಿಪ್ರಾಯ ಭಾಗದ ಜನರದ್ದಾಗಿದೆ.

ಸುವಾಸಾ ಹದಿನೇಳು ಕೋಟಿ ವೆಚ್ಚದಲ್ಲಿ ನಿರ್ಮಾಣಗೊಂಡಿರುವ ನಿಲ್ದಾಣದಲ್ಲಿ ಪ್ರಯಾಣಿಕರಿಗೆ ಆಗತ್ಯ ಸೌಕರ್ಯಗಳು ಇವೆ. ಇದರ ನಿರ್ವಹಣೆ ಉದ್ದಾಟನೆಗಷ್ಟೇ ಸೀಮಿತವಾಗದೆ ಕಾರ್ಯರವಾಗಿರಲಿ ಎನ್ನುವದು ಜನರ ಆಶಯವಾಗಿದೆ.

ನಿಲ್ದಾಣದಲ್ಲಿ ಪ್ರಯಾಣಿಕರು ಲಿಫ್ಟ್, ಫುಟ್ ಓವರ್ ಸೇತುವೆ ಬಳಕೆ ಮಾಡಬೇಕು. ಹಳಗಿಳ ಮೇಲೆ ದಾಟುವ ಪ್ರಯತ್ನ ಬೇಡ ಎನ್ನುವ ಸಲಹೆ, ಸೂಚನೆಯಾಗಿದ್ದರೂ ಇದನ್ನು ನಿರ್ಲಕ್ಷಿಸಿ ಒಂದು ಮತ್ತು ಎರಡನೇ ಪ್ಲಾಟ್ ಫಾರ್ಮ್‌ಗಳ ಮಧ್ಯೆ ಹಳಗಳ ಮೇಲೆಯೇ ದಾಟುವ ದೃಶ್ಯಗಳು ಸಾಕಷ್ಟು ಕಾಣುತ್ತವೆ. ಇದಕ್ಕೆ ಅವಕಾಶ ನೀಡಬಾರದೆ ಎಂಬುದು ಪ್ರಜ್ಞಾವಂತರ ಒತ್ತಾಸೆಯಾಗಿದೆ.

ಜು. 17 ರಂದು ಮಧ್ಯಾಹ್ನ 2ಕ್ಕೆ ಅಳ್ವಾವರ ನಿಲ್ದಾಣದಲ್ಲಿ ನಡೆಯುವ ಉದ್ಘಾಟನಾ ಕಾರ್ಯಕ್ರಮದಲ್ಲಿ ಕೇಂದ್ರ ಸಚಿವರಾದ ಪ್ರಲ್ಹಾದ ಜೋಶಿಯವರು ಪಾಲ್ಗೊಳ್ಳಲಿದ್ದಾರೆ.

ಸಭಾಪತಿ ಬಸವರಾಜ ಹೊರಟ್ಟಿ, ಮಾಜಿ ಸಚಿವ ಸಂತೋಷ ಲಾಡ, ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ, ಎಸ್.ವ್ಹಿ. ಸಂಕನೂರ, ಎಫ್.ಎಚ್. ಜಕ್ಕನ್ನವರ, ಪ್ರದೀಪ ಶೆಟ್ಟರ, ಸಲೀಂ ಅಹ್ಮದ ಇತರರು ಭಾಗವಹಿಸುವರು.

ಮಹಿಳಾ ಪ್ರಯಾಣಿಕರ ಸಮಸ್ಯೆ ಬಗೆಹರಿಸಿಲಿ

ಸಾಂಗ್ಲಿಯಿಂದ ಬೆಂಗಳೂರಿಗೆ ಸಂಚರಿಸುವ ರಾಣಿ ಚೆನ್ನಮ್ಮ ರೈಲಿನಲ್ಲಿ ಮಹಿಳಾ ವಿಶೇಷ ಬೋಗಿ ಮತ್ತು ಅಂಗವಿಕಲರ ಬೋಗಿಗಳಿಗೆ ಇಲ್ಲದೇ ತೊಂದರೆಯಾಗುತ್ತಿದ್ದು, ಇದರ ಕಡೆಗೆ ಅಧಿಕಾರಿಗಳು ಗಮನಹರಿಸಿ ಮಹಿಳಾ ಪ್ರಯಾಣಿಕರ ಸಮಸ್ಯೆ ಬಗೆಹರಿಸಬೇಕು

■ ನಿಸಾರಅಹ್ಮದ ಖತೀಬ | ಅಳ್ವಾವರ.

ಕೇಂದ್ರ ಸಚಿವರ ಮೂಲಕ ಇಲಾಖೆಗೆ ಮನವಿ

ಅಳ್ವಾವರ ಮೂಲಕ ಸಂಚರಿಸುವ ಎಲ್ಲಾ ರೈಲುಗಳಿಗೆ ನಿಲುಗಡೆ ಕಲ್ಪಿಸುವಂತೆ ಕೇಂದ್ರ ಸಚಿವರಾದ ಪ್ರಲ್ಹಾದ ಜೋಶಿಯವರ ಮುಖಾಂತರ ಇಲಾಖೆಯವರಿಗೆ ಒತ್ತಾಯ ಮಾಡಲಾಗಿದೆ. ನಮ್ಮ ಬೇಡಿಕೆ ಈಡೇರಿಸುವ ಭರವಸೆಯೂ ಇದೆ. ಮುಖ್ಯವಾಗಿ ಬೆಂಗಳೂರು ಮತ್ತು ಮಂತ್ರಾಲಯ ಕಡೆಗೆ ಹೋಗುವವರಿಗೆ ರೈಲಿನ ಆಗತ್ಯತೆ ಬಹಳಷ್ಟಿದೆ

■ ಪ್ರವೀಣ ಪವಾರ

। ಸದಸ್ಯರು ರೈಲು ನಿಲ್ದಾಣದ ನಲಹಾ ಸಮಿತಿ ಅಳ್ವಾವರ.

ಬಹಳಷ್ಟು ಸುಧಾರಣೆ

ಸ್ವಾತಂತ್ರ್ಯ ಹೋರಾಟದಿಂದಲೂ ಐತಿಹಾಸಿಕ ಹಿನ್ನೆಲೆ ಹೊಂದಿರುವ ಅಳ್ವಾವರ ನಿಲ್ದಾಣ ಬಹಳಷ್ಟು ಸುಧಾರಣೆ ಕಂಡಿದ್ದು, ಎಲ್ಲಾ ರೈಲುಗಳಿಗೆ ನಿಲುಗಡೆ ಮಾಡುವುದರಿಂದ ತನ್ನತನವನ್ನು ಉಳಿಸಿಕೊಳ್ಳಲು ಸಾಧ್ಯವಿದೆ.

■ ಎಂ.ಸಿ. ಹಿರೇಮಠ

। ವಾಣಿಜ್ಯೋದ್ಯಮಿ, ಅಳ್ವಾವರ.

21 ರಂದು ಕ್ಯಾಂಪಸ್ ಸಂದರ್ಶನ

ಹುಬ್ಬಳ್ಳಿ: ಕೆಎಲ್‌ಇ ಸಂಸ್ಥೆಯ ಶ್ರೀಮತಿ ಸಿ.ಎ. ಮುನವಳ್ಳಿ ಪಾಲಿಟೆಕ್ನಿಕ್‌ನಲ್ಲಿ ಜು. 21 ರಂದು ಬೆಳಗ್ಗೆ 9 ಗಂಟೆಗೆ ಬೆಂಗಳೂರು ಮೂಲದ ಗ್ರೀಮೇಟರ್ ಟೆಕ್ನಾಲಜೀಸ್ ಎಲ್‌ಎಲ್‌ಪಿ ಸಂಸ್ಥೆಯ ಕ್ಯಾಂಪಸ್ ಸಂದರ್ಶನ ಆಯೋಜಿಸಿದೆ.

ಇ ಆ್ಯಂಡ್ ಸಿ, ಇ ಆ್ಯಂಡ್ ಇ, ಸಿಎಸ್, ಮೆಕ್ಯಾನಿಕಲ್, ಆಟೋಮೊಬೈಲ್, ಮೆಕಾಟ್ರಾನಿಕ್, ಟೂಲ್ ಆ್ಯಂಡ್ ಡೈ-ಮೇಕಿಂಗ್ ಮತ್ತು ಸಿವಿಲ್‌ನಲ್ಲಿ ಡಿಪ್ಲೊಮಾ ಪಡೆದ ವಿದ್ಯಾರ್ಥಿಗಳು ಹಾಗೂ ಕನಿಷ್ಠ ಶೇ.50 ಬ್ಯಾಕ್‌ಲಾಗ್ ಹೊಂದಿರುವ ಬ್ಯಾಕ್ ಮಾತ್ರ ಸಂದರ್ಶಕ್ಕೆ ಹಾಜರಾಗಬಹುದು. ಹೆಚ್ಚಿನ ವಿವರಗಳಿಗಾಗಿ ದೂ.ಸಂ. 98802 71208ಕ್ಕೆ ಸಂಪರ್ಕಿಸಬಹುದು ಎಂದು ಪ್ರಾಂಶುಪಾಲ ಪ್ರೊ. ವೀರೇಶ ಅಂಗಡಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

SBI | ಭಾರತೀಯ ಸ್ಟೇಟ್ ಬ್ಯಾಂಕ್
ಗೃಹ ಸಾಲ ಕೇಂದ್ರ
ಆಡಳಿತ ಕಛೇರಿ: ಕುಸುಗಲ್ ರಸ್ತೆ, ಹುಬ್ಬಳ್ಳಿ-580023
ದೂರವಾಣಿ: 0836-2212529/2261408, ಇಮೇಲ್: sbi.05211@sbi.co.in

2002 ರ ಭದ್ರತಾ ಹಿತಾಸಕ್ತಿ ಜಾಲ ನಿಯಮಗಳನ್ನಯ ಸಾಲಗಾರರು ಮತ್ತು ಜಾಮೀನುದಾರರಿಗೆ ತಗಾದೆ ನೋಟೀಸಿನ ಬದಲಿ ಸೇವೆ

ಸ್ಥಿರಾಸ್ತಿಗಳ ಪ್ರತಿಭೂತಿಕರಣ ಹಾಗೂ ಪುನರ್‌ನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾಲ ಕಾಯ್ದೆ, 2002ರ ನಿಯಮ 13 ರ ಉಪನಿಯಮ (2)ರಲ್ಲಿ ಇಟ್ಟಿರುವ

ಕೆಳಕಂಡಿರುವ ಸಾಲಗಾರರಿಗೆ ಈ ಕೆಳಗಿನಂತೆ ಸ ಸೂಚನೆ ನೀಡಲಾಗಿದೆ. ಇವರು ಬ್ಯಾಂಕಿಗೆ ಸಾಲದ ಅಸಲು ಮತ್ತು ಬಡ್ಡಿಯ ಮೊತ್ತವನ್ನು ಮರುಪಾವತಿಸಲು ವಿಫಲರಾಗಿದ್ದು ಹಾಗೂ ಸದರಿ ಸಾಲವನ್ನು ಅನುತ್ಪಾದಕ ಸಾಲವೆಂದು ವರ್ಗೀಕರಿಸಲಾಗಿದೆ. ಈ ಸಂಬಂಧ ಕೊಟ್ಟಿರುವಗಳನ್ನು 2002ರ ಹಣಕಾಸುಗಳ ಪ್ರತಿಭೂತಿಕರಣ ಹಾಗೂ ಪುನರ್‌ನಿರ್ಮಾಣ ಕಾಯ್ದೆ 13(2)ರಡಿ ಆವಗೆಗೆ ನೀಡಲಾಗುತ್ತು ಅದರ ಕೆಳಕಂಡಿರ ಕೊಟಗಳ ಸಾಲಗಾರರ ವಿಳಾಸಕ್ಕೆ ಬಟಾಬಡೆಯಾಗದೇ ಹಿಂತಿರುಗಿ ಬಂದಿರುತ್ತಿಗ್ಗು ಈ ಸಾರ್ವಜನಿಕ ನೋಟಿಸು ಮೂಲಕ ತಿಳಿಸಲಾಗಿದೆ.

1.	ಸಾಲಗಾರರ ಹೆಸರು ಮತ್ತು ವಿಳಾಸ: 1. ಶ್ರೀ ಮೊಹಮ್ಮದಗೌಸ್ ಬಾಜ ತಂದೆ: ನಿಜಾಮಸಾಬ್, 2. ಶ್ರೀಮತಿ ಬಾಜಿ ಹನೀಫಾ ಬಾಜ ಗಂಡ: ಮೊಹಮ್ಮದಗೌಸ್, ಮನೆ ವಿಳಾಸ: ಪ್ಲಾಟ್ ನಂ. 21, ತಿಕೇ ಕಾಲೋನಿ, ಗುಡಿಹಾಳ ರಸ್ತೆ, ಕಂದಗಲ್ ಹೊಲ್ ಹಿಂದೆ, ಬಿಜ್ಜಿ ಶಾಲೇಗೆ ಹತ್ತಿರ, ಶಿವಮ್ಮ ನಗರ, ಹುಬ್ಬಳ್ಳಿ - 580 024 ಮತ್ತು ಇಲ್ಲಿಯವರೆಗೆ ಸಾಲ: ಪ್ಲಾಟ್ ನಂ. 12, ಮಯೂರಿ ನಗರ, ಆನಂದನಗರ ಹತ್ತಿರ, ಮೀನಾಕ್ಷಿ ಕೃಷ್ಣಾಪುರ ಗ್ರಾಮ, ಹುಬ್ಬಳ್ಳಿ-580030,ಧಾರವಾಡ.
	ಖಾತೆ ಸಂಖ್ಯೆ : HTL - 42469743791, SURAKSHA-42471960755
	ಎನ್.ಪಿ.ಎ. ದಿನಾಂಕ: 25-06-2026 | ತಗಾದೆ ನೋಟೀಸಿನ ದಿನಾಂಕ: 29-06-2026
	ಸಾಲದ ಬಾಕಿ : ರೂ. 60,20,554/- (ರೂಪಾಯಿಯ ಅರವತ್ತು ಲಕ್ಷ ಇಪ್ಪತ್ತು ಸಾವಿರದ ಐದು ನೂರಾ ಐವತ್ತಾರು ಮಾತ್ರ) ದಿನಾಂಕ 28.06.2026ಕ್ಕೆ ಇದ್ದಂತೆ ಹಾಗೂ ದಿನಾಂಕ 29.06.2026 ರಿಂದ ಮುಂದಿನ ಬಡ್ಡಿ ಮತ್ತು ಇತರೆ ಖರ್ಚು ವೆಚ್ಚಗಳು
	ಆಸ್ತಿಯ ವಿವರ: ಶ್ರೀ ಮೊಹಮ್ಮದಗೌಸ್ ಬಾಜ ತಂದೆ: ನಿಜಾಮಸಾಬ್ ಮತ್ತು ಶ್ರೀಮತಿ ಬೀಬಾ ಹುಸೇನ್ ಬಾಜ ಗಂಡ: ಮೊಹಮ್ಮದಗೌಸ್ ಇವರ ಹೆಸರಿನಲ್ಲಿರುವ ಹುಬ್ಬಳ್ಳಿ ಕೃಷ್ಣಾಪುರ ಗ್ರಾಮ, ಮಯೂರಿ ನಗರದಲ್ಲಿರುವ ಇ-ಆಸ್ತಿ ನಂ. 36-6-503-12, ವಾರ್ಡ್ ನಂ. 36, ಸರ್ವೆ ನಂ. 92, ವರಿತ ಪ್ಲಾಟ್ ನಂ. 12 ಹೊಂದಿರುವ ಜಾಗ & ಕಟ್ಟಡ ವಿಸ್ತೀರ್ಣ 148.6 ಚ.ಮೀ. (2400 ಚ.ಅಡಿ) ಆಸ್ತಿಗೆ ಸರಿಹೊಂದಿ ಶ್ರೀಮತಿ ಬಾಜಿ ಹನೀಫ ಮೊಹಮ್ಮದ್ ಪ್ಲಾಟ್ ನಂ. 29 & ಪ್ಲಾಟ್ ನಂ. 30ರ ಭಾಗ. ಪತ್ರಿಯವಣ್ಣಿ ರಸ್ತೆ, ಉತ್ತರಕ್ಕೆ: ಪ್ಲಾಟ್ ನಂ. 13, ದಕ್ಷಿಣಕ್ಕೆ: ಪ್ಲಾಟ್ ನಂ. 11 & 12ರ (ದಿನಾಂಕ 04.12.2023 ರಂದು (ದಕ್ಷಿಣ) ಹುಬ್ಬಳ್ಳಿ ಉಪ ನೋಂದಣಿ ಕಛೇರಿಯಲ್ಲಿ ನೋಂದಣಿಯಾದ ಕ್ರಯ ಪತ್ರ ಸಂಖ್ಯೆ HBL-1-06032/2023-24)
2.	ಸಾಲಗಾರರ ಹೆಸರು & ವಿಳಾಸ: ಶ್ರೀ ಗೋಪಿಂದರಾಜ ಎಳ್ಳೆ ತಂದೆ: ಮಾಣಿಕಚಂದ್ ಪೆರುಮಾಲ್ ಎಳ್ಳೆ, #159-ಎ, 1ಕೇ ಫೇಸ್, ಎ ಕ್ರಾಸ್, ಜೆಪಿನಗರ ಸಾಲು, ಗಣ ರಸ್ತೆ, ಗೊಲ್ಲರಹಟ್ಟಿ ಕ್ರಿಶ್ಚ ಎದುರು, ಹುಬ್ಬಳ್ಳಿ - 580 020 ಮತ್ತು ಇಲ್ಲಿಯವರೆಗೆ ಸಾಲ ಕಛೇರಿ: ಶ್ರೀ ಗೋಪಿಂದರಾಜ ಎಳ್ಳೆ ವ್ಯಾಪಾರಿಗಳ & ಕಂಪನಿ, ನಂಬ್ಲಿ ಪಾಲಂಡ್ ಟ್ರಾಫಿಕ್, ಎಸಿಎಸ್‌ಸಿ ರಸ್ತೆ, ಎಸಿಎಸ್‌ಸಿ ಸಂಕಾತ, ಗೋಕಾಕ-ಬೆಳಗಾವಿ-591 307.
	ಖಾತೆ ಸಂಖ್ಯೆ : HL-37285590964, Home Top-up loan-37374369581
	ಎನ್.ಪಿ.ಎ. ದಿನಾಂಕ: 28-06-2026 | ತಗಾದೆ ನೋಟೀಸಿನ ದಿನಾಂಕ: 29-06-2026
	ಸಾಲದ ಬಾಕಿ: ರೂ. 10,55,931/- (ರೂಪಾಯಿಯ ಹತ್ತು ಲಕ್ಷ ಐವತ್ತೈದು ಸಾವಿರದ ಒಂಬತ್ತುನೂರಾ ಮುಪ್ಪತ್ತೊಂದು ಮಾತ್ರ) ದಿನಾಂಕ 28.06.2026ಕ್ಕೆ ಇದ್ದಂತೆ ಹಾಗೂ ದಿನಾಂಕ 29.06.2026 ರಿಂದ ಮುಂದಿನ ಬಡ್ಡಿ ಮತ್ತು ಇತರೆ ಖರ್ಚು ವೆಚ್ಚಗಳು
	ಆಸ್ತಿಯ ವಿವರ: ಶ್ರೀ ಗೊಪಿಂದರಾಜ ಎಳ್ಳೆ ಇವರ ಹೆಸರಿನಲ್ಲಿರುವ ಹುಬ್ಬಳ್ಳಿ ಕುಸುಗಲ್ ರೋಡ್, ಚೇತನಾ ಕಾಲೊನಿ, ಕೇಶ್ವಾಪುರ ಗ್ರಾಮದಲ್ಲಿರುವ ಆರ್.ಎಸ್. ನಂ. 70ಎ/1, ವರಿತ ಪ್ಲಾಟ್ ನಂ. 159ರ ಜಾಗ & ಕಟ್ಟಡದ ವಿಸ್ತೀರ್ಣ 90 ಗುಂಟಾ 11.5 ಆಣಾ ಅಂದರೆ ಸುಮಾರಾದ & ಆರ್.ಸಿ. ವರಿತ & ಜಾಗದ ವಿಸ್ತೀರ್ಣ 782 ಚದುರಡಿ ಒಳಗೊಂಡ ಆಸ್ತಿಯಲ್ಲಿ ಕೇವಲ 1/2 ಸಾಲ ವಾರ್ಡೇಷ್ಟ ಸಹಿತ ಸಂಪೂರ್ಣ ಆಸ್ತಿ & ಇದರ ಚಕುಂದಿ ಮೊತ್ತವೆಲ್ಲ ಪ್ಲಾಟ್ ನಂ. 159ಸಿ, ಪತ್ರಿಯವಣ್ಣಿ: ಪ್ಲಾಟ್ ನಂ. 159ಎ ರ ಪಶ್ಚಿಮ ಜಾಗೆ ಉತ್ತರಕ್ಕೆ: ಆರ್.ಎಸ್. ನಂ. 70ಡಿ, ದಕ್ಷಿಣಕ್ಕೆ: 60 ಅಡಿ ರಸ್ತೆ (ದಿನಾಂಕ 30-12-2014 ರಂದು ಆಧಿಕ ಉಪನೊಂದಣಿ ಕಚೇರಿ (ಉತ್ತರ)ದಲ್ಲಿ ನೋಂದಣಿಯಾದ ಪಿರಿಂದಿ ಪತ್ರ ನಂ. ಎಚ್.ಬಿ.ಎಸ್ 1-10307-2014-15, ಸಿಡಿ ನಂ. ಎಚ್.ಬಿ.ಎಸ್.ಡಿ. 51)

ನೋಟೀಸಿನಲ್ಲಿ ಮುಚ್ಚಿಸಲು ಹಣವಾಗಿದ್ದು ಪ್ರಸ್ತೆ ಮಾಡಲಾಗಿದೆ. ಈ ನೋಟೀಸು ಪ್ರಕಟಣೆಯ ದಿನದಿಂದ **60** ದಿನಗಳೊಳಗಾಗಿ ಸಾಲದ ಚಕುಂದಿನ ಮೊತ್ತವನ್ನು ಮರುಪಾವತಿಸಲು ಮೊಳ್ಳಂದ ಸಾಲಗಾರರಿಗೆ ಸೂಚಿಸಿ ನೀಡಲಾಗಿದೆ. ಇದಕ್ಕೆ ಹೆಚ್ಚುವರಿ ಈ ಪ್ರಕಟಣೆಯ **60** ದಿನಗಳ ಸಂಜರ ಮೊಹಲತ್ ಪ್ರಸ್ತೆ ಹಾಗೂ ಪುನರ್‌ನಿರ್ಮಾಣ ಮತ್ತು ಪ್ರಕ್ರಿಯೆಯ ಹಿತಾಸಕ್ತಿ ಜಾಲ ಕಾಯ್ದೆ 2002 ಕಾಯ್ದೆ 13 ರಂಪಲಿಯ (4) ರಡಿ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಸ್ಥಳ : ಹುಬ್ಬಳ್ಳಿ
ದಿನಾಂಕ : 16.07.2026
ಸಹಿ/- ಅಧಿಕೃತ ಅಧಿಕಾರಿ
ಭಾರತೀಯ ಸ್ಟೇಟ್ ಬ್ಯಾಂಕ್

ರಾಷ್ಟ್ರೀಯ ಜ್ಞಾನಗಂಗಾ ಪುರಸ್ಕಾರ ಪ್ರದಾನ

ಸಂ.ಕ. ಸಮಾಚಾರ ಅಣ್ಣಿಗೇರಿ

ಅಡ್ಡೂರ-ರಾಯೂರ-ಗದಗ ಬೃಹನ್ಮಠದ ಲಿಂಗೈಕ್ಯ ಪಂಚಾಕ್ಷರ ಶಿವಾಚಾರ್ಯರ ಸ್ಮಾಮಿಜಿ ಸ್ಮರಣಾರ್ಥ ಸ್ಥಾಪಿತವಾದ ಅಣ್ಣಿಗೇರಿಯ ಜ್ಞಾನಗಂಗಾ ಚಾರಿಟೇಬಲ್ ಟ್ರಸ್ಟ್ ಅವರ ಪ್ರಥಮ ರಾಷ್ಟ್ರೀಯ ಜ್ಞಾನಗಂಗಾ ಪುರಸ್ಕಾರ ಪ್ರಶಸ್ತಿಯನ್ನು ಗದಗ ವೀರೇಶ್ವರ ಪುಣ್ಯಾಶ್ರಮದ ಪೂಜ್ಯರಾದ ಕಲ್ಲಯ್ಯಜ್ಜನವರಿಗೆ ಇತ್ತೀಚೆಗೆ ಪ್ರದಾನ ಮಾಡಲಾಯಿತು.

ಪುಣ್ಯಾಶ್ರಮದ ಜಾತ್ರಾ ಮಹೋತ್ಸವದಲ್ಲಿ ಜರಗಿದ ಸಮಾರಂಭದಲ್ಲಿ ಧಾರವಾಡ ಮುರುಘಾಮಠದ ಮಲ್ಲಿಕಾರ್ಜುನ ಸ್ವಾಮೀಜಿ ಬಳಗಾನೂರು, ಚಿಕ್ಕೆಗನೆಕೊಪ್ಪ ಶರಣಾಯಿಯಾಗಿ ಉಪಸ್ಥಿತರು ಪೂಜ್ಯರು ಕಲ್ಲಯ್ಯಜ್ಜನವರಿಗೆ ಪ್ರಶಸ್ತಿ ಪ್ರದಾನ ಮಾಡಿ ಅಭಿನಂದಿಸಿದರು.

ಸಾಹಿತ್ಯ, ಕಲೆ, ಸಂಸ್ಕೃತಿ ಹಾಗೂ ಸಮಾಜ ಸೇವೆ ಕ್ಷೇತ್ರದಲ್ಲಿ ಅತ್ಯುನ್ನತ ಸೇವೆ ಸಲ್ಲಿಸುವ ಸಾಧಕರನ್ನು ಗೌರವಿಸುವ ಉದ್ದೇಶದಿಂದ ರಚಿತವಾದ ಟ್ರಸ್ಟ್, ಸಮಾಜ ಸೇವೆ ಹಾಗೂ ಕಲಾ ಕ್ಷೇತ್ರಗಳಲ್ಲಿ ತಮ್ಮ ಅಮೋಘ ಸೇವೆಯ ಮೂಲಕ ಅಮೂಲ್ಯ ಕೊಡುಗೆ ನೀಡಿದ ಕಲ್ಲಯ್ಯಜ್ಜನವರಿಗೆ ಈ ಪ್ರಶಸ್ತಿ ಪ್ರದಾನ ಮಾಡಲಾಗಿದೆ.

ಟ್ರಸ್ಟನ ಕಾರ್ಯದರ್ಶಿ ಎಂ.ಎನ್. ಯಲಬುರ್ಗಿ ಪ್ರಶಸ್ತಿ ಪ್ರದಾನಕ್ಕೂ ಮುನ್ನ ಬಿನ್ನವತ್ತಳೆ ಓದಿ, ಈ ರಾಷ್ಟ್ರೀಯ ಪ್ರಶಸ್ತಿಯನ್ನು ಈಗ ಸಾಂಕೇತಿಕವಾಗಿ ಐದು ಸಾವಿರ ಮೊತ್ತದೊಂದಿಗೆ ಪ್ರದಾನ